**Government of Karnataka**

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 05-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 9 ಪ್ರಾಸಾಃ 7

| | |
|---|---|
| ಹೆಸರು | ಅರ್ಚನಾ |
| ತಂದೆಯ ಹೆಸರು | ಹನುಮರಡ್ಡಿಗೌಡ |
| ವಯಸ್ಸು | 28 ವರ್ಷ |
| ಉದ್ಯೋಗ | ಗ್ರಾಮಲೆಕ್ಕಾಧಿಕಾರಿಗಳು ರಾಯಚೂರು |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನಾನು 2016 ರಿಂದ 2022 ರವರೆಗೆ ದೇವದುರ್ಗ ತಾಲೂಕಿನಲ್ಲಿ ಗ್ರಾಮಲೆಕ್ಕಾಧಿಕಾರಿ ಎಂದು ಭೂಮಿ ಕೇಂದ್ರ ತಹಶೀಲ್ದಾರ ಕಾರ್ಯಾಲಯ ದೇವದುರ್ಗ ದಲ್ಲಿ ಕೆಲಸ ಮಾಡಿರುತ್ತೇನೆ.

ಸುಣ್ಣದಕಲ್ ಗ್ರಾಮದ ಸ ನಂ 12, ವಿಸ್ತೀರ್ಣ 16 ಎಕರೆ 07 ಗುಂಟೆ ಜಮೀನಿನಗೆ ಸಂಬಂಧಪಟ್ಟಂತೆ 2002 ರಿಂದ 2007 ರವರೆಗಿನ ಪಹಣೀಗಳನ್ನು ಅರ್ಜಿದಾರರಾದ ಹನುಮಂತ್ರಾಯ ರವರಿಗೆ ಕೊಟ್ಟಿರುತ್ತೇನೆ. ನಂತರ ಅದೇ ಪಹಣಿಯನ್ನು 2003 ರಿಂದ 2016 ರವರೆಗೆ ಬಾಲಪ್ಪ ತಂದೆ ಹನುಮಪ್ಪ ಇವರ ಹೆಸರಿನಿಂದ ಹನುಮಂತ್ರಾಯ ತಂದೆ ಬಾಲಪ್ಪ, ಲಕ್ಷ್ಮೀ ಗಂಡ ಹನುಮಂತ್ರಾಯ, ಬಾಲಗೌಡ ತಂದೆ ಹನುಮಂತ್ರಾಯ, ಮಲ್ಲಿಕಾರ್ಜುನ ತಂದೆ ಹನುಮಂತ್ರಾಯ ಇವರ ಹೆಸರಿಗೆ ಮುಟೇಶನ್ ಬದಲಾವಣೆಯಾದ ಬಗ್ಗೆ ಮುಟೇಶನ್ ನ್ನು ತೆಗೆದು ಪೋಲಿಸರಿಗೆ ಕೊಟ್ಟಿರುತ್ತೇನೆ. ಸಾಕ್ಷಿದಾರರು ಸದರಿ ಪಹಣಿ ಮತ್ತು ಮುಟೇಶನ್‌ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ

ನಿಶಾನೆಯಾಗಿ ಗುರುತಿಸಲಾಗಿದೆ. ಸಾಕ್ಷಿ ನಿ ಪಿ 27 ರಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅವರ ಸಹಿಯನ್ನು ನಿ ಪಿ 27(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ಗುರುತಿಸಲು ಆಗುವುದಿಲ್ಲ.

**ಪಾಟಿಸವಾಲು: ಶ್ರೀ ಎಮ್.ಎಮ್. ವಕೀಲರಿಂದ:-**

1. ಪಹಣಿಗಳನ್ನು ಯಾವ ದಿನಾಂಕದಂದು ಕೊಟ್ಟಿದ್ದೇನೆಂದು ನನಗೆ ನೆನಪಿಲ್ಲ. ನಾನು ಕೊಟ್ಟಿರುವಂತಹ ಪಹಣಿಗಳಲ್ಲಿ ಬಾರ್ ಕೋಡ್ ಇರಲಿಲ್ಲ. ನಿ ಪಿ 27 ಮುಟೇಶನ್ ನ್ನು ಯಾವ ತಾರೀಖಿನಿಂದು ಕೊಟ್ಟಿದ್ದೀರಾ ಎಂದರೆ ನನಗೆ ನೆನಪಿಲ್ಲ. ಪೋಲಿಸರು ಮತ್ತು ಫಿರ್ಯಾದಿದಾರರು ಕೇಳಿರುವಂತೆ ನೀವು ಪಹಣೀ ಮತ್ತು ಮುಟೇಶನ್‌ಗಳನ್ನು ಕೊಟ್ಟಿದ್ದೀರಿ ಎಂದರೆ ಸರಿ. ಪಹಣಿಗಳನ್ನು ಯಾವ ಕಾರಣಕ್ಕೆ ಕೊಟ್ಟಿದ್ದೀರಾ ಮತ್ತು ಅವುಗಳಲ್ಲಿ ಏನಾಗಿದೆ ಎಂದು ನಿಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಪಹಣಿ ಮತ್ತು ಮುಟೇಶನ್‌ಗಳನ್ನು ಪೋಲಿಸರಿಗೆ ಮತ್ತು ಚಾಸಾ-1 ರವರಿಗೆ ಕೊಟ್ಟಿರುವ ವಿಷಯ ಬಿಟ್ಟು ಈ ಪ್ರಕರಣದ ಬಗ್ಗೆ ನಿಮಗೆ ಏನೂ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ